ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾಪ ಇರುವುದಿಲ್ಲ.

ಆ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ 1,87.179 ಆಗಿದೆ. ಮಾರ್ಗಸೂಚಿಗಳ ಪ್ರಕಾರ ಪ್ರತಿ 30.000 ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿದೆ. ಅದರ ಪ್ರಕಾರ 6 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಈ ತಾಲ್ಲೂಕಿಗೆ ಮಂಜೂರು ಮಾಡಬಹುದಾಗಿದ್ದರೂ, ಈಗಾಗಲೇ ಅಲ್ಲಿ 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಈ ತಾಲ್ಲೂಕಿನಲ್ಲಿ ಇನ್ನೂ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

358 ಶ್ರೀ ರೋಷನ್ ಬೇಗ್ ಆರ್. (ಶಿವಾಜಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹೊರವಲಯದಲ್ಲಿ ಹೊಸದಾಗಿ ಸರಕಾರಿ ಆಸ್ಪತ್ರೆಗಳನ್ನು ಸ್ಥಾಪಿಸುವ ಉದ್ದೇಶ ಸರಕಾರದ ಮುಂದಿದೆಯೇ;

ಆ) ಬೆಂಗಳೂರು ಹೊರವಲಯದಲ್ಲಿ ಸರಕಾರಿ ಆಸ್ಪತ್ರೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳಗಳನ್ನು ಗುರುತಿಸಲಾಗಿದೆಯೇ;

ಇ) ಈ ಯೋಜನೆಗಾಗಿ ಸರಕಾರವು ನಿಗದಿಪಡಿಸಿರುವ ಅಂದಾಜು ವೆಚ್ಚವೆಷ್ಟು;

ಈ) ಪ್ರತಿಯೊಂದು ಆಸ್ಪತ್ರೆಗೆ ನಿಗದಿ ಪಡಿಸಿದ ಹಾಸಿಗೆಯ ಸಂಖ್ಯೆಯೆಷ್ಟು; ಎಂಬ ಪೂರ್ಣ ಮಾಹಿತಿಯನ್ನು ಮಾನ್ಯ ಸಚಿವರು ಉತ್ತರಿಸುವರೆ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬೆಂಗಳೂರು ಹೊರವಲಯದಲ್ಲಿ ಹೊಸದಾಗಿ 250 ಹಾಸಿಗೆಗಳ 4 ಸಾರ್ವಜನಿಕ ಆಸ್ಪತ್ರೆಗಳನ್ನು ಸ್ಥಾಪಿಸುವ ಹಾಗೂ ಇಂದಿರಾನಗರದಲ್ಲಿ ಪ್ರಸ್ತುತ ನಿರ್ಮಿಸುತ್ತಿರುವ 250 ಹಾಸಿಗೆಗಳ ಆಸ್ಪತ್ರೆಯನ್ನು 500 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ.

ಆ) ಈ ಕೆಳಕಂಡ ಸ್ಥಳಗಳನ್ನು ತಾತ್ಕಾಲಿಕವಾಗಿ ಗುರುತಿಸಲಾಗಿದೆ.

1. ಬೆಂಗಳೂರು (ಉತ್ತರ): ವರ್ತುಲ ರಸ್ತೆಗೆ ಹತ್ತಿರವಾಗಿರುವ ಕಾಚರಕನಹಳ್ಳಿ ಹೆಚ್.ಆರ್.ಬಿ.ಆರ್. ಲೇಔಟ್‌ನಲ್ಲಿ ಬ್ಯಾಪ್ಕೋಗೆ ಸಂಬಂಧಪಟ್ಟ ಜಾಗದಲ್ಲಿ 10 ಎಕರೆ ಜಮೀನಿನಲ್ಲಿ.
2. ಬೆಂಗಳೂರು (ದಕ್ಷಿಣ): ಬನಶಂಕರಿ 6ನೇ ಹಂತದಲ್ಲಿರುವ ಬಿ.ಡಿ.ಎ. ಲೇಔಟ್‌ನಲ್ಲಿ 10 ಎಕರೆಗಳನ್ನು ಆಸ್ಪತ್ರೆ ನಿರ್ಮಾಣಕ್ಕಾಗಿ ಬಿ.ಡಿ.ಎ. ವತಿಯಿಂದ ಹಂಚಿಕೆ ಮಾಡಬೇಕಿರುವ ಸ್ಥಳದಲ್ಲಿ.
3. ಬೆಂಗಳೂರು (ಪಶ್ಚಿಮ): ಮಾಗಡಿ ರಸ್ತೆಯಲ್ಲಿ ವರ್ತುಲ ರಸ್ತೆಗೆ ಹೊಂದಿಕೊಂಡಿರುವ ನಿರಾಶ್ರಿತರ ಪರಿಹಾರ ಕೇಂದ್ರದ ಜಾಗದಲ್ಲಿ 10 ಎಕರೆ ಜಮೀನಿನಲ್ಲಿ.
4. ಬೆಂಗಳೂರು (ಪೂರ್ವ): ಈಗ ನಿರ್ಮಿಸುತ್ತಿರುವ 250 ಹಾಸಿಗೆಗಳ ಇಂದಿರಾನಗರ ಆಸ್ಪತ್ರೆಯನ್ನು 500 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವುದು.
5. ಬೆಂಗಳೂರು (ಕೇಂದ್ರ): ಮಾಗಡಿ ರಸ್ತೆಯಲ್ಲಿರುವ ಹಳೆಯ ಕುಷ್ಠರೋಗ ಆಸ್ಪತ್ರೆಯನ್ನು ಕೆಡವಿ ಹೊಸ ಆಸ್ಪತ್ರೆಯ ನಿರ್ಮಾಣ.

ಇ) 250 ಹಾಸಿಗೆಗಳ ಹೊಸ ಆಸ್ಪತ್ರೆಗಳ ಸ್ಥಾಪನೆಗೆ ತಲಾ ರೂ.33.00 ಕೋಟಿಗಳ ವೆಚ್ಚದ ಅಂದಾಜು ಮಾಡಲಾಗಿದೆ.

ಈ) ಹೊಸದಾಗಿ ನಿರ್ಮಾಣ ಮಾಡುವ 4 ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪ್ರತಿಯೊಂದು ಆಸ್ಪತ್ರೆಯು 250 ಹಾಸಿಗೆಯ ಸಾಮರ್ಥ್ಯವನ್ನು ಹೊಂದಿರುತ್ತದೆ.